ನಿರ್ದೇಶಕರು ಗುಲ್ಬರ್ಗಾ ಇವರ ವರದಿ ಬಂದ ನಂತರ ಕೈಗೊಂಡಿರುವ ಕ್ರಮವೇನು?

ಇ) ಈಗಲಾದರೂ ಸಹ ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಇವರ ಅಂತಿಮ ವರದಿ ಪ್ರಕಾರ ಕ್ರಮಕೈಗೊಳ್ಳಲು ಸರ್ಕಾರಕ್ಕೆ ಎಷ್ಟು ಅವಧಿಬೇಕು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಹೌದು ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರು ಅವರ ಪತ್ರ ದಿನಾಂಕ : 25-3-91ರ ಮೂಲಕ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಈ ವರದಿಯೂ ಸಹ ಅಪೂರ್ಣವಾಗಿದೆ.

ಆ) ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ಅವರು ಅವರ ದಿನಾಂಕ: 25-3-91ರ ಪತ್ರದ ಮೂಲಕ ಕಳುಹಿಸಿದ್ದ ಅಂತಿಮ ವರದಿಯು ಸಹ ಅಪೂರ್ಣವಾಗಿದ್ದು ಸದರೀ ವರದಿಯನ್ನು ಕೃಷಿ ಇಲಾಖೆಯ ದಿನಾಂಕ : 25-4-91ರ ಪತ್ರದ ಮೂಲಕ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಗೆ ಹಿಂತಿರುಗಿಸಿ ಪರಿಪೂರ್ಣ ವರದಿಯನ್ನು ಕೂಡಲೇ ಸಲ್ಲಿಸಲು ಕೋರಲಾಗಿದೆ. ಈ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಅವರೊಡನೆ ವ್ಯವಹರಿಸಲಾಗುತ್ತಿದ್ದು, ಪರಿಪೂರ್ಣ ವರದಿಯನ್ನು ಸಲ್ಲಿಸಲು ಆಗ್ರಹಿಸಲಾಗಿದೆ.

ಇ) ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರಿಂದ ಅಂತಿಮ ಪರಿಪೂರ್ಣ ವರದಿಯು ಇನ್ನೂ ಬಂದಿರುವುದಿಲ್ಲ. ಸದರೀ ವರದಿಯು ಬಂದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ವನ್ಯ ಪ್ರಾಣಿಗಳಿಂದ ಬಲಿಯಾದ ಕುಟುಂಬಗಳಿಗೆ ವಿಮಾ ಸೌಲಭ್ಯ

2557 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವನ್ಯ ಪ್ರಾಣಿಗಳ ಹಾವಳಿಗೆ ತುತ್ತಾಗಿ ಮರಣ ಹೊಂದುವ ಕುಟುಂಬಗಳಿಗೆ ವಿಮಾ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಜೀವವಿಮಾ ನಿಗಮದ ಜೊತೆ ಹೊಂದಾಣಿಕೆ ಮಾಡಿ ಕೊಂಡಿದೆಯೇ?

ಆ) ಈಗ ಈ ಯೋಜನೆಯು ಯಾವ ಯಾವ ಜಿಲ್ಲೆಗಳಲ್ಲಿ ಜಾರಿಯಲ್ಲಿದೆ?

ಇ) ಅಗತ್ಯವಾದಾಗ ವಿಮಾ ಕಂತುಗಳನ್ನು ಯಾರು ತುಂಬುವರು?

ಈ) ಈ ಯೋಜನೆಯು ಯಾವ ಯಾವ ಪ್ರಾಣಿಗಳಿಂದ ತುತ್ತಾಗಿರುವ ಜನಕ್ಕೆ ಅನ್ವಯಿಸುತ್ತದೆ.?

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಖಾಲಿ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ

3555 - ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮ ಲೆಕ್ಕಾಧಿಕಾರಿಗಳ ಖಾಲಿ ಹುದ್ದೆಗಳೆಷ್ಟು? (ಜಿಲ್ಲಾ ಹಾಗೂ ತಾಲ್ಲೂಕುವಾರು ಬೆಳಗಾವ್ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಾಗೂ ಬೈಲಹೊಂಗಲ ತಾಲ್ಲೂಕಿನ ಗ್ರಾಮವಾರು ವಿವರ ತಿಳಿಸುವುದು)

ಆ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ರಾಜ್ಯದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆ ಖಾಲಿಯಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದಿಲ್ಲವೇ?

ಈ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆ ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿರುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಒಟ್ಟು 1948 ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ವಿವರ ಅನುಬಂಧದಲ್ಲಿ ತೋರಿಸಿದೆ. (ತಾಲ್ಲೂಕುವಾರು ವಿವರ ನಂತರ ಒದಗಿಸಲಾಗುವುದು)

ಆ) ಇದೆ.

ಇ) ಹೌದು.

ಈ) ಈ ಖಾಲಿ ಹುದ್ದೆಗಳನ್ನು ಮಿತವೇತನ ಪದವೀಧರರನ್ನು ಮತ್ತು ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡಿರುವ ದಿನಗೂಲಿ ನೌಕರರನ್ನೂ ಭರ್ತಿ ಮಾಡಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಅನುಬಂಧ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ -3555

2. ಶ್ರೀ ಶಿವಾನಂದ ಪೆಚ್. ಕೌಜಲಗಿ, ವಿಧಾನಸಭಾ ಸದಸ್ಯರು.

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	ಗ್ರಾಮ ಲೆಕ್ಕಾಧಿಕಾರಿಗಳ ಖಾಲಿ ಹುದ್ದೆ ಸಂಖ್ಯೆ
1.	ಬೆಂಗಳೂರು (ನ)	07
2	.ಬೆಂಗಳೂರು(ಗ್ರಾ)	72
3.	ಕೋಲಾರ	121
4.	ಶಿವಮೊಗ್ಗ	19
5.	ಚಿತ್ರದುರ್ಗ	98
6.	ತುಮಕೂರು	160
7.	ಮೈಸೂರು	98
8.	ಚಿಕ್ಕಮಗಳೂರು	58
9.	ಹಾಸನ	138
10.	ದಕ್ಷಿಣ ಕನ್ನಡ	132
11.	ಮಂಡ್ಯ	61
12.	ಕೊಡಗು	08
13.	ಗುಲ್ಬರ್ಗಾ	196

15.	ಬಳ್ಳಾರಿ	96
16.	ರಾಯಚೂರು	64
17.	ಬೆಳಗಾವಿ	132
18.	ಧಾರವಾಡ	339
19.	ಉತ್ತರ ಕನ್ನಡ	76
20.	ಬಿಜಾಪುರ	73
	ಒಟ್ಟು	1948

ಅ) ಬೈಲಹೊಂಗಲ ತಾಲ್ಲೂಕಿನಲ್ಲಿ ಒಟ್ಟು 21 ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಗ್ರಾಮಗಳ ವಿವರ :

1) ಗುಡಿಕಟ್ಟಿ	(2) ಶಿವನೂರು	(3) ಮಲ್ಲಾಪುರ ಕೆ.ಎ
(4) ಕೇಸರಿಕೊಪ್ಪ	(5) ಬಸಾಪುರ	(6) ಮಲ್ಲಾಪುರ ಕೆ.ಎಸ್.
(7) ಮರಿಕಟ್ಟಿ	(8) ಬಾವಿಹಾಳ	(9) ಸಾಣೆಕೊಪ್ಪ
(10) ಹೆಚ್.ನಜರಾಪುರ	(11) ವೀರಾಪುರ	(12) ಮಡ್ಡರಪಳ್ಳಿ
(13) ಅಣೆಗೋಳ	(14) ಡಿಗ್ಗಾಂವ್	(15) ಎಂ. ನಜರಾಪುರ
(16) ಮಣಿಬಸರ	(17) ಮಡಿಕೆಬಾವಿ	

(18) ಹೆಬ್ಬುವರಿ ಗ್ರಾ. ಲೆ. -1 (19) ರಜಾಮೀಸಲು - 3.

ಆ) ಸೌದತ್ತಿ ತಾಲ್ಲೂಕಿನಲ್ಲಿ ಒಟ್ಟು 8 ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳು ಖಾಲಿ ಇವೆ. ಗ್ರಾಮಗಳ ವಿವರ :

1) ಪಡಳಿ	(2) ಕಡಬಿ	(3) ರೈನಾಪುರ
(4) ಹುಲಿ	5) ಮೊರಬ	(6) ಬಳ್ಳದಪಳ್ಳಿ
(7) ತೆಗ್ಗಿದಾಳ	(8) ಹಂಚಿನಾಳ	

ಶಿವಮೊಗ್ಗದಲ್ಲಿ ಅತಿ ಮಳೆಯಿಂದ ನೊಂದವರಿಗೆ ಪರಿಹಾರ

3558 - ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ದಿನಾಂಕ : 17.11.90ರಿಂದ ಸಂಜೆ ಭಾರೀ ಮಳೆ ಬಿದ್ದು ಕಡು ಬಡವರು ಅತೀ ತೊಂದರೆ ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಡವರಿಗೆ ಏನು ಪರಿಹಾರ ಕೊಡಲಾಗಿದೆ? ಮತ್ತು ಇನ್ನೇನಾದರೂ ಪರಿಹಾರ ಕೊಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಅಕ್ಕಿ ವಿತರಣೆ -ತಲಾ 5 ಕೆ.ಜಿ.ಯಂತೆ 330 ಕುಟುಂಬಗಳಿಗೆ ನೀಡಿದೆ.

(ಇ) ನಗದು ಪರಿಹಾರ (ಮನೆ ದುರಸ್ತಿ)- ನಿಯಮಾವಳಿಗಳ ಪ್ರಕಾರ 330 ಕುಟುಂಬಗಳಿಗೆ ಒಟ್ಟು 1,67,850-00 ರೂ.ಗಳನ್ನು ನೀಡಿದೆ.

(ಇ) ನಗದು ಪರಿಹಾರ - ತ್ವರಿತ ಪರಿಹಾರವಾಗಿ ತಲಾ 50 ರೂ.ಗಳಂತೆ 330 ಕುಟುಂಬಗಳಿಗೆ ನೀಡಿದೆ.

ಈಗಾಗಲೇ ಪರಿಹಾರವನ್ನು ಅರ್ಹನೊಂದವರಿಗೆ ನೀಡಿರುವುದರಿಂದ, ಇನ್ನೇನೂ